# ಸಹಕಾರ ಚುನಾವಣಾ ಪ್ರಾಧಿಕಾರ

ಟಿ.ಟಿ.ಎಂ.ಸಿ. ಕಟ್ಟಡ, 3ನೇ ಮಹಡಿ, ಎ-ಬ್ಲಾಕ್, ಶ್ರೀಕೆಂಗಲ್‌ಹನುಮಂತಯ್ಯ ರಸ್ತೆ, ಶಾಂತಿ ನಗರ, ಬೆಂಗಳೂರು-27.

e-mail : coeckarnataka@gmail.com
Phone : 080-22220066 / 29709014

ಸಂಖ್ಯೆ:ಸಚುಪ್ರಾ/ಆಡಳಿತ/ಚುನಾವಣೆ/ಕೊರೋನಾ/2020 ದಿನಾಂಕ 26.03.2020

## ಸುತ್ತೋಲೆ

ವಿಷಯ : ರಾಜ್ಯದಲ್ಲಿ ಕೋರೋನಾ ವೈರಸ್ ಹರಡದಂತೆ ಮುಂಜಾಗ್ರತ ಕ್ರಮವಾಗಿ ಸಹಕಾರ ಸಂಘಗಳ / ಸಹಕಾರಿ ಬ್ಯಾಂಕುಗಳ ಚುನಾವಣೆಗಳನ್ನು ಮುಂದೂಡುವ ಬಗ್ಗೆ.

ಉಲ್ಲೇಖ :
01) ಈ ಕಛೇರಿಯ ಸಮಸಂಖ್ಯೆಯ ಸುತ್ತೋಲೆ ದಿನಾಂಕ : 19.03.2020,
02) ಈ ಕಛೇರಿಯ ಸಮಸಂಖ್ಯೆಯ ಸುತ್ತೋಲೆ ದಿನಾಂಕ : 20.03.2020,
03) ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು ಇವರ ಟಿಪ್ಪಣಿ ಸಂಖ್ಯೆ : ಸಸಂಶಾ(ಎಂ):16/2020 ದಿನಾಂಕ 19.03.2020.
04) ಭಾರತ ಸರ್ಕಾರದ ಕೇಂದ್ರ ಗೃಹ ಸಚಿವಾಲಯ, ನಾರ್ಥ್ ಬ್ಲಾಕ್, ನವ ದೆಹಲಿ ಇವರ ಆದೇಶ ಸಂಖ್ಯೆ :40-3/2020-ಡಿಎಂ-1(ಎ)ದಿನಾಂಕ 24.03.2020.

★★★★★

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, CORONA VIRUS/COVID-19 ರೋಗವು ಸಾಂಕ್ರಾಮಿಕವಾಗಿ ಹರಡುತ್ತಿದ್ದು, ರಾಜ್ಯದಲ್ಲಿ ಕೋರೋನಾ ವೈರಸ್ ಭೀತಿ ತಲೆದೋರಿರುವ ಹಿನ್ನಲೆಯಲ್ಲಿ ಎಲ್ಲೆಲ್ಲಿ ಜನಸಂದಣಿ ಉಂಟಾಗುತ್ತದೆಯೋ ಅಂತಹ ಸಭೆ, ಸಮಾರಂಭ, ಮದುವೆ ಸಮಾರಂಭಗಳು ಸೇರಿದಂತೆ ಮತ್ತು ಸರ್ಕಾರಿ ಹಾಗೂ ಖಾಸಗಿ ಕಾರ್ಯಕ್ರಮಗಳು ಜರುಗುವುದನ್ನು ಸರ್ಕಾರವು ನಿರ್ಬಂಧಿಸಿ ತಕ್ಷಣದಿಂದ ಜಾರಿಯಾಗುವಂತೆ ಆದೇಶಿಸಿದ ಕಾರಣ ಸಹಕಾರ ಸಂಘಗಳ ಚುನಾವಣೆಗಳನ್ನು ದಿನಾಂಕ 31.03.2020ರವರೆಗೆ ಮುಂದೂಡಿ ಉಲ್ಲೇಖ(1) ಮತ್ತು (2)ರಂತೆ ಈ ಕಛೇರಿಯಿಂದ ಸುತ್ತೋಲೆಗಳನ್ನು ಹೊರಡಿಸಲಾಗಿತ್ತು.

02. ಉಲ್ಲೇಖ(3) ಮತ್ತು (4)ರಂತೆ ದೇಶದಲ್ಲಿ ತಲೆದೋರಿರುವ CORONA VIRUS/COVID-19 ರೋಗವು ಸಾಂಕ್ರಾಮಿಕವಾಗಿ ಹರಡುತ್ತಿರುವ ಹಿನ್ನಲೆಯಲ್ಲಿ ಇಡೀ ಭಾರತ ದೇಶದೆಲ್ಲೆಡೆ ಕೇಂದ್ರ ಸರ್ಕಾರವು ಉಲ್ಲೇಖ(4)ರ ತನ್ನ ಆದೇಶದಂತೆ ದಿನಾಂಕ 25.03.2020 ರಿಂದ 21 ದಿನಗಳವರೆಗೆ ಲಾಕ್‌ಡೌನ್ ಮಾಡಿ ಆದೇಶಿಸಲಾಗಿರುತ್ತದೆ.

03. ಈ ಸಂಬಂಧವಾಗಿ ಕೆಲವು ಜಿಲ್ಲೆಗಳಿಂದ ಚುನಾವಣಾಧಿಕಾರಿಗಳು ಹಾಗೂ ಕೆಲವು ರಿಟರ್ನಿಂಗ್ ಅಧಿಕಾರಿಗಳು ಚುನಾವಣೆಗಳ ಮತದಾನವನ್ನು ಮಾತ್ರ ಮುಂದೂಡಲ್ಪಟ್ಟಿರುತ್ತದೆಯೇ? ಅಥವಾ ಚುನಾವಣೆಯ ಎಲ್ಲಾ ಪ್ರಕ್ರಿಯೆಗಳು ಮುಂದೂಡಲ್ಪಟ್ಟಿರುತ್ತವೆಯೇ? ಎಂಬ ಬಗ್ಗೆ ಪ್ರಾಧಿಕಾರಕ್ಕೆ ಸ್ಪಷ್ಟೀಕರಣವನ್ನು ಕೋರುತ್ತಿರುತ್ತಾರೆ.

Scanned with CamScanner

04. ಈ ಹಿನ್ನಲೆಯಲ್ಲಿ, ದಿನಾಂಕ 31.03.2020 ರವರೆಗೆ ಮುಂದೂಡಿದ್ದ ಸಹಕಾರ ಸಂಘಗಳ/ ಸಹಕಾರಿ ಬ್ಯಾಂಕುಗಳ/ ಎಲ್ಲಾ ತರಹದ ಸಹಕಾರಿಗಳ ಚುನಾವಣೆಗಳನ್ನು ಮತ್ತು ಚುನಾವಣೆಯ ಎಲ್ಲಾ ಪ್ರಕ್ರಿಯೆಗಳನ್ನು **ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 14ಹೆಚ್** ರಂತೆ ಮುಂದಿನ ಆದೇಶದವರೆಗೆ ಮುಂದೂಡಿದೆ ಎಂದು ತಿಳಿಸಲು ಮಾನ್ಯ ಆಯುಕ್ತರಿಂದ ನಿರ್ದೇಶಿಸಲ್ಪಟ್ಟಿದ್ದೇನೆ.

**(ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

ತಮ್ಮ ವಿಶ್ವಾಸಿ,

M. B. Manjunatha

**(ಎಂ.ಬಿ.ಮಂಜುನಾಥ)**
ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು.

**<u>ಪ್ರತಿಯನ್ನು ಈ ಕೆಳಕಂಡವರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.</u>**

01. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಚುನಾವಣಾಧಿಕಾರಿಗಳು.
02. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01.
03. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52.
04. ರಾಜ್ಯದ ನಾಲ್ಕು ಪ್ರಾಂತಗಳ ಸಹಕಾರ ಸಂಘಗಳ ಜಂಟಿ ನಿಬಂಧಕರುಗಳಿಗೆ.
05. ರಾಜ್ಯದ ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರುಗಳಿಗೆ ಕಳುಹಿಸುತ್ತಾ, ಸದರಿಯವರು ಈ ಸುತ್ತೋಲೆಯನ್ನು ಎಲ್ಲಾ ರಿಟರ್ನಿಂಗ್ ಅಧಿಕಾರಿಗಳಿಗೆ ತಲುಪಿಸಲು ಕ್ರಮವಿಡುವಂತೆ ತಿಳಿಸಿದೆ.

Scanned with CamScanner